# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
# ಹಿರೇಕೆರೂರು

**<u>ಸಿ ಸಿ ನಂ. ೨೪ ಃ ೨೦೧೩</u>**

ಸಿ ಡಬ್ಲ್ಯೂ ಃ ೪
ಪಿ ಡಬ್ಲ್ಯೂ ಃ ೨

| | | |
|---|---|---|
| ಹೆಸರು | ಃ | ಮಹಾದೇವಪ್ಪ |
| ತಂದೆಃ ಗಂಡನ ಹೆಸರು | ಃ | ಹನುಮಂತಪ್ಪ ಮಡಿವಾಳರ |
| ವಯಸ್ಸು | ಃ | ೭೦ ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಮಾಸೂರು |

ಇಂದು ದಿನಾಂಕ ಃ ೨೬-೧೦-೨೦೧೬ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ಪಿರ್ಯಾದಿದಾರ ಮತ್ತು ಆರೋಪಿ ಪರಿಚಯವಿದೆ. ದಿಃ ೨೬-೮-೨೦೧೨ ರಂದು ಸಾಯಂಕಾಲ ೫ ರಿಂದ ೫.೩೦ ಗಂಟೆ ಸಮಯದಲ್ಲಿ ರಾಮಪ್ಪ ದಿವಾಂಗದ ಇವರ ಹೋಟೇಲ್ ಮುಂಬಾಗ ಪಿರ್ಯಾದುದಾರ ಬಸ್ ಸ್ಟಾಂಡ ಕಡೆಗೆ ಹೋರಟಿದ್ದ ಆ ಸಮಯದಲ್ಲಿ ಆರೋಪಿ ಬಂದು ಪಿರ್ಯಾದಿಯ ಎದೆ ಮೆಲಿನ ಶರ್ಟನ್ನು ಹಿಡಿದು ಚಪ್ಪಲಿಯಿಂದ ಮೈಮೇಲೆ ಹೋಡೆದ. ಆಗ ನಾನು ಸ್ತಳಕ್ಕೆ ಹೋಗಿ ಜಗಳ ಬಿಡಿಸಿ ಸಮಾದಾನಪಡಿಸಿದೆ ಅಲ್ಲದೇ ಆರೋಪಿ ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದ, ಮತ್ತು ಆರೋಪಿ ಪಂಚಾಯಿತಿಯಲ್ಲಿ ಅವ್ಯವಹಾರ ಮಾಡಿದ ಬಗ್ಗೆ ಪಿರ್ಯಾದುದಾರ ಆತನ ಮೇಲೆ ಕೇಸು ಮಾಡಿದ್ದ ಆ ಸಬಂದ ನೀನು ನನ್ನ ಮೇಲೆ ಕೇಸು ಮಾಡಿದ್ದಿ ಅಂತಾ ಪಿರ್ಯಾದಿಗೆ ಚಪ್ಪಲಿಯಿಂದ ಹೊಡೆದ. ನಾನು ಜಗಳ ಬಿಡಿಸಿ ಸಮಾದಾನಪಡಿಸಿ ಪಿರ್ಯಾದಿಯನ್ನು ಕಳುಹಿಸಿದೆ ನಂತರ ಪೋಲೀಸರು ನನ್ನನ್ನು ಕರೆಸಿದ್ದರು ನಾನು ಪೊಲೀಸರ ಮುಂದೆ ಹೇಳಿಕೆ ಸಲ್ಲಿಸಿರುತ್ತೇನೆ ಮತ್ತು ನೀನು ಈ ದಿನ ಉಳಿದುಕೊಂಡೆ ಇನ್ನೊಂದು ಸಿಕ್ಕಲ್ಲಿ ನಿನ್ನನ್ನು ನೋಡಿಕೊಳ್ಳುತ್ತೇನೆ ಅಂತಾ ಹೇಳುತ್ತಿದ್ದನು. ನ್ಯಾಯಾಲಯದ ಮುಂದೆ ಇರುವ ಚಪ್ಪಲಿಯನ್ನು ನೋಡಿ ಗುರುತಿಸುತ್ತೇನೆ ಅದನ್ನು ಈಗಾಗಲೇ ಮು ಮಾ ೧ ಅಂತಾ ಗುರುತಿಸಲಾಗಿದೆ.

ಪಾಟ ಸವಾಲುಃ ಆರೋಪಿ ಪರ ವಕೀಲರಿಂದ

ನನ್ನ ಮನೆ ಗಟನಾ ಸ್ತಳದಿಂದ ಸುಮಾರು ೨ ಕಿ ಮೀ ಅಂತರದಲ್ಲಿದೆ. ನಾನು ದಿನಾಲು ಬೆಳಗ್ಗೆ



ಹೊಲಕ್ಕೆ ಹೋಗುತ್ತೇನೆ. ಗಟನಾ ಸ್ತಳದಲ್ಲಿ ಮೂರು ನಾಲ್ಕು ಜನ ಇದ್ದೆವು ಮತ್ತು ಆ ದಿನ ಸಂತೆ ಇತ್ತು. ಕುಮಾರ ಮತ್ತು ಪಾಲಾಕ್ಷಪ್ಪ ಮತ್ತು ನಾನು ಇದ್ದೆವು ಉಳಿದವರ ಹೆಸರು ಗೊತ್ತಿಲ್ಲ. ಜಗಳವು ಸಾಯಂಕಾಲ ೫ ರಿಂದ ೫.೩೦ ಗಂಟೆ ವರೆಗೆ ನಡೆಯಿತು. ಈ ಗಟನೆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಸಲ್ಲಿಸಿದ್ದೇನೆ. ಠಾಣೆಗೆ ಎಂದು ಹೋಗಿದ್ದೆ ಅಂತಾ ದಿನಾಂಕ ನೆನಪಿಲ್ಲ. ಠಾಣೆಗೆ ನಾನು ಒಬ್ಬನೇ ಹೋಗಿದ್ದೆ ನನ್ನ ಸಂಗಡ ಬೇರೆ ಯಾರೂ ಇರಲಿಲ್ಲ. ನಾನು ಪೊಲೀಸರ ಮುಂದೆ ಸಲ್ಲಿಸಿದ ಹೇಳಿಕೆಯಲ್ಲಿ ಆರೋಪಿ ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದು ಚಪ್ಪಲಿಯಿಂದ ಹೊಡೆದ ಅಂತಾ ಹೇಳಿಕೆ ಸಲ್ಲಿಸಿರುತ್ತೇನೆ.

ಗಟನಾ ಸ್ತಳದಲ್ಲಿ ಆರೋಪಿ ಒಬ್ಬನೇ ಇದ್ದ ಆತನೇ ಬಂದು ಪಿರ್ಯಾದಿಯ ಎದೆ ಮೇಲಿನ ಶರ್ಟನ್ನು ಹಿಡಿದ. ಪಿರ್ಯಾದುದಾರ ಆರೋಪಿ ಪರಮೇಶನ ಮೇಲೆ ಕೇಸು ಮಾಡಿದ್ದಾನೆ ಅಂತಾ ಗೊತ್ತಾಯಿತು ಮತ್ತು ಆರೋಪಿ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ ಅಂತಾ ಕೆಲಸ ಮಾಡುತ್ತಿದ್ದ. ಗಟನಾ ಸ್ತಳದಲ್ಲಿ ನಾನು ಇದ್ದೆ ಆರೋಪಿ ಪಿರ್ಯಾದಿಗೆ ಬೈದ ಮತ್ತು ಚಪ್ಪಲಿಯಿಂದ ಹೊಡೆದ ಅಂತಾ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಗಟನೆ ನಡೆದಿಲ್ಲ ಮತ್ತು ಪಿರ್ಯಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮತ್ತು ಗಲಾಟೆಯನ್ನು ಬಿಡಿಸಿ ಸಮಾದಾನಪಡಿಸಿದೆ ಅಂತಾ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ನಾನು ಈ ದಿನ ಪಿರ್ಯಾದಿ ಸಂಗಡ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಮತ್ತು ಆ ಸಮಯದಲ್ಲಿ ಮೂರು ನಾಲ್ಕು ಜನರು ಇದ್ದರು ಅಂತಾ ಸುಳ್ಳು ನುಡಿಯುತ್ತೇನೆಂದರೆ ಸರಿಯಲ್ಲ. ಮು ಮಾ ೧ ಚಪ್ಪಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ,

ಹಿರಿಯ ಸಿ ಜೆ ಮತ್ತು ಜೆ ಎಂ ಎಫ್ ಸಿ

ಹಿರೇಕೆರೂರು

# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹಿರೇಕೆರೂರು

**<u>ಸಿ ಸಿ ನಂ. ೨೪ ಃ ೨೦೧೩</u>**

ಸಿ ಡಬ್ಲ್ಯೂ ಃ ೫
ಪಿ ಡಬ್ಲ್ಯೂ ಃ ೩

| | | |
|---|---|---|
| ಹೆಸರು | ಃ | ಪಾಲಾಕ್ಷಪ್ಪ |
| ತಂದೆಃ ಗಂಡನ ಹೆಸರು | ಃ | ನಾಗೇಶಪ್ಪ ಆರೇರ |
| ವಯಸ್ಸು | ಃ | ೪೨ ವರ್ಷ |
| ಉದ್ಯೋಗ | ಃ | ಕಿರಾಣಿ ಅಂಗಡಿ |
| ವಾಸ ಸ್ಥಳ | ಃ | ಮಾಸೂರು |

ಇಂದು ದಿನಾಂಕ ಃ ೨೬–೧೦–೨೦೧೬ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ಪಿರ್ಯಾದುದಾರ ಮತ್ತು ಆರೋಪಿ ಪರಿಚಯವಿದೆ. ದಿಃ ೨೬–೮–೨೦೧೧ ರಂದು ಬಾನುವಾರ ಸಂಜೆ ೫.೩೦ ಗಂಟೆ ಸಮಯದಲ್ಲಿ ಮಾಸೂರಿನ ಕೋಟೆ ಬಾಗಿಲ ಹತ್ತಿರ ನನ್ನ ಅಂಗಡಿ ಇದೆ ಮತ್ತು ಆ ಸಮಯದಲ್ಲಿ ನಾನು ಅಂಗಡಿಯಲ್ಲಿದ್ದೆ. ನನ್ನ ಅಂಗಡಿಯಿಂದ ಸುಮಾರು ೧೫೦ ಮೀ ದೂರದಲ್ಲಿ ಆರೋಪಿ ಪಿರ್ಯಾದಿಯ ಕತ್ತಿನ ಪಟ್ಟಿ ಹಿಡಿದು ಚಪ್ಪಲಿಯಿಂದ ಹೊಡೆದುಕೊಂಡು ನನ್ನ ಅಂಗಡಿ ಹತ್ತಿರ ಕರೆದುಕೊಂಡು ಬಂದ ಆಗ ನಾನು ಎದ್ದು ಗಲಾಟೆ ಬಿಡಿಸಲು ಹೋದೆ, ನಾನು ಗಲಾಟೆಯನ್ನು ಹೇಳಿ ಬಿಡಿಸಿದ ಆದರೂ ಸಹ ಆರೋಪಿ ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದ. ನಂತರ ಮತ್ತೆ ನಾನು ಬಿಡಿಸಿದ ನಂತರವೂ ಆರೋಪಿ ಪಿರ್ಯಾದಿಯನ್ನು ಹಿಡಿದು ಚಪ್ಪಲಿಯಿಂದ ಹೊಡೆಯುತ್ತಾ ಊರ ಬಸ್‌ಸ್ಟ್ಯಾಂಡ ಹತ್ತಿರ ಹೋದ. ಆರೋಪಿ ಪಿರ್ಯಾದಿಗೆ ನೀನು ನನ್ನ ಬಗ್ಗೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಕೇಸು ಮಾಡಿದ್ದಿ ಅಂತಾ ಅವಾಚ್ಯ ಶಬ್ದಗಳಿಂದ ಬೈದ. ನ್ಯಾಯಾಲಯದ ಮುಂದೆ ಇರುವ ಚಪ್ಪಲಿಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು ಮಾ ೧ ಅಂತಾ ಗುರುತಿಸಲಾಗಿದೆ. ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗುರುತಿಸುತ್ತೇನೆ.

( ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಬಾಗಶಃ ಸಾಕ್ಷಿ ಅಂತಾ ಪರಿಗಣಿಸಿದ್ದರಿಂದ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದ

ದಿಃ ೨೮–೧೦–೨೦೧೨ ರಂದು ನಾನು ಸಲ್ಲಿಸಿದ ಹೇಳಿಕೆಯಲ್ಲಿ ನಂತರ ಅವನು ಮೋಹನನಿಗೆ ಊರಾಗಿದ್ದು ಬಾಳುವೆ ಮಾಡಲೇ ಸೂಳೆ ಮಗನೇ ನಿನ್ನ ಜೀವಾ ತೆಗಿತೇನೆ ಅಂತಾ ಜೀವದ ದಮಕಿ ಹಾಕುತ್ತಾ ಹೋಗಿದ್ದು ಇರುತ್ತದೆ ಅಂತಾ ನಾನು ಪೊಲೀಸರ ಮುಂದೆ ಸಲ್ಲಿಸಿದ ಹೇಳಿಕೆಯಲ್ಲಿ ಹೇಳಿದ್ದೇನೆಂದೆರ ಸರಿ.

ಪಾಟಿ ಸವಾಲು ಃ ಶ್ರೀ ಎಸ್ ಹೆಚ್ ಪಿ    ವಕೀಲರಿಂದ

ಈ ಹಿಂದೆ ನಾನು ಪೊಲೀಸರ ಮುಂದೆ ಈ ಗಟನೆಗೆ ಸಂಬಂದಿಸಿದಂತೆ ಹೇಳಿಕೆ ಸಲ್ಲಿಸಿದ್ದೇನೆ. ಪೊಲೀಸ್ ಠಾಣೆಗೆ ಯಾವ ದಿನಾಂಕ ಹೋಗಿದ್ದೆ ಅಂತಾ ನೆನಪಿಲ್ಲ. ಪೊಲೀಸರು ನನ್ನ ಅಂಗಡಿ ಹತ್ತಿರ ಸಹಿ ಮಾಡಿಸಿಕೊಂಡರು ನಾನು ಒಬ್ಬನೇ ಇದ್ದೆ ಮತ್ತು ಹೇಳಿಕೆಯನ್ನು ದಾಖಲಿಸಿಕೊಂಡು ಸಹಿ ಪಡೆದರು. ಯಾವ ಪೊಲೀಸ ಬಂದಿದ್ದ ಅಂತಾ ಹೆಸರು ಗೊತ್ತಿಲ್ಲ. ಈ ಗಟನೆ ಸಾಯಂಕಾಲ ೫ ರಿಂದ ೫.೩೦ ವರೆಗೆ ನಡೆಯಿತು. ಸ್ತಳದಲ್ಲಿ ಸುಮಾರು ೧೦, ೧೫ ಜನರು ಇದ್ದರು ಅವರ ಹೆಸರು ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಆರೋಪಿ ಚಪ್ಪಲಿಯಿಂದ ಪಿರ್ಯಾದಿಗೆ ಹೊಡೆದ ಅಂತಾ ನಾನು ಪೊಲೀಸರ ಮುಂದ ೆಸಲ್ಲಿಸಿದ ಹೇಳಿಕೆಯಲ್ಲಿ ಹೇಳಿದ್ದೇನೆ. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು ಪಿರ್ಯಾದುದಾರ ಕೂಡಿಯೇ ಬಂದ್ದಿದ್ದೇನೆ ಎಂದರೆ ಸರಿ ಆ ಕಾರಣದಿಂದ ಪಿರ್ಯಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮತ್ತು ಆರೋಪಿ ಚಪ್ಪಲಿಯಿಂದ ಪಿರ್ಯಾದಿಗೆ ಹೊಡೆದ ಮತ್ತು ನಾನೇ ಹೋಗಿ ಜಗಳ ಬಿಡಿಸಿ ಸಮಾದಾನಪಡಿಸಿದೆ ಅಂತಾ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ ಮತ್ತು ಆರೋಪಿ ಚಪ್ಪಲಿಯಿಂದ ಪಿರ್ಯಾದಿಗೆ ಹೊಡೆಯುತ್ತಾ ಬಸ್ ಸ್ಟಾಂಡ ಕಡೆಗೆ ಹೋದ ಅಂತಾ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ,

ಹಿರಿಯ ಸಿ ಜೆ ಮತ್ತು ಜೆ ಎಂ ಎಫ್ ಸಿ

ಹಿರೇಕೆರೂರು